# **ನಟರಾಜ–ನವರಸ**

—ಶತಾವಧಾನಿ ಡಾ॥ ಆರ್. ಗಣೇಶ್

ಚತುರಾಭಿನಯಭಾವನ – ರಸಾಯನ!
ಚತುರಭಿನಯಜೀವನ – ಜನಾವನ! ॥ ಪ ॥

ಸುಂದರಿ ಮಧುರಾನಗರಿಯ ನಾಯಿಕೆ
ಬಂದೊಲಿದಳಲಾ ನಿನ್ನ ಬಳಿ
ಮಂದಹಾಸಮಾಧುರ್ಯದ ವಿಧಿಯೇ!
ಸುಂದರೇಶ! **ಶೃಂಗಾರ**ಭರ! ॥ ೧ ॥

ವೈರಿಭಯಂಕರ! ತ್ರಿಪುರಲಯಂಕರ!
ಶೂರಗಜಾಸುರದಾರಣ!
ಚಾರುಸಂಗರವಿಹಾರ! ಶಂಕರ!
**ವೀರ**ವರ್ಯ! ವಿನತಾರ್ಯ! ॥ ೨ ॥

ದಕ್ಷನ ಯಾಗದೆ ಮಡಿಯೆ ಮಡದಿ ಬಾ–
ಷ್ಪಾಕ್ಷನಾದೆಯಲ ಶೋಕಹತ!
ದೀಕ್ಷಾಕಲ್ಪಿತಮೃಕಂಡುನಂದನ–
ರಕ್ಷಾ! **ಕರುಣಾ**ಕಲಿತ! ॥ ೩ ॥

ಲೋಕಮೋಹಕರಮೋಹಿನಿಯ ನವಾ–
ಲೋಕನವಿಸ್ಮಿತ! ಸುಸ್ಮಿತನೇ!
ಸ್ವೀಕರಿಸುತೆ ಹರಿಯನು ಮಣಿಕಂಠನ
ಪ್ರಾಕಟಪಡಿಸಿದ ಸು**ಮಹಾದ್ಭುತ**! ॥ ೪ ॥

ಪಾರ್ವತಿಯ ತಪಃಪರೀಕ್ಷೆಗೆಂದೇ
ಶರ್ವ! ನೋಂತ ಪರಿಹಾಸಪರ!
ಪರ್ವಾಯಿತಲಘುಲೀಲ! ಪೇಶಲ!
ಸರ್ವದಾ **ಹಾಸ್ಯ**ಹೇವಾಕ! ॥ ೫ ॥

ಭಸ್ಮಾಸುರನಿಂದಂಜುವ ಚದುರೇ!
ವಿಸ್ಮಯಾವಹ**ಭಯಾನಕ**ನೇ!
ಆ ಸ್ಮರನ ಮಹಾಘಸ್ಮರನಾಗಿಯು–
ಮಸ್ಮಯಮೂರ್ತಿಯೆ! ಶ್ರಿತಕೀರ್ತಿಯೇ! ॥ ೬ ॥

ಕ್ಷೀರಸಾಗರವ ಕಡೆವ ಕಾಲದೊಳು
ಸಾರಿದ ರತ್ನಗಳೆಲ್ಲವನೂ
ದೂರವಿಡುವ ಭೋಗಜುಗುಪ್ಸಿತನೇ!
ಧೀರ! ದಿವ್ಯ**ಬೀಭತ್ಸ**ಭರ! ॥ ೭ ॥

ಕ್ಷುದ್ರಮನೋವೈಕಲ್ಯದ ಮಾರನ
ಮುದ್ರಿಪ ನೊಸಲಿನ ಕಣ್ಣವನೇ!

ವಿದ್ರಾವಿಸಿಯುಂ ವಿನತರ ಪೊರೆಯುವ
**ರೌದ್ರ**ಮೂರ್ತಿ! ಶಿವತಾಸ್ಫೂರ್ತಿ! ॥ ೮ ॥

**ಶಾಂತ!** ನಿಜಾತ್ಮನಿಯಂತ್ರಿತ! ಯಮಿಜನ–
ಚಿಂತನವಟತರುಮೂಲಸ್ಥಿತ!
ಅಂತರಂಗಸಂವೇದ್ಯಮೌನವಾ–
ಕ್ಕಾಂತ! ಕೃತಾಂತಹತರ ಪೊರೆಯೈ ॥ ೯ ॥

(ಇದು ಗೀತ–ನೃತ್ಯಗಳಿಗೆ ಸೊಗಸಾಗಿ ಒದಗಿಬರಬಲ್ಲ ರಚನೆ; ಆದಿತಾಳದಲ್ಲಿ, ರಾಗಮಾಲಿಕೆಗಳ ರೂಪದಿಂದ ಹಾಡಿ, ಕುಣಿದು ಶಿವನನ್ನೂ ಸಹೃದಯಶಿವರನ್ನೂ ರಂಜಿಸಲು ವಿಪುಲಾವಕಾಶವಿರುವ ಸಾಂಪ್ರದಾಯಿಕಪ್ರಬಂಧ.)